# ಶ್ರೀಮಾತೆಯವರೊಂದಿಗೆ

ಮೂಲ ಬಂಗಾಳಿ : **ಸ್ವಾಮಿ ಶಾರದೇಶಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೩**

ಜಯರಾಮಬಾಟಿಯಲ್ಲಿ ಒಬ್ಬಳು ಬಾಲವಿಧವೆಯಿದ್ದಳು. ಅವಳು ತುಂಬ ಬಡವಿ. ತುಂಬ ಕಷ್ಟಪಟ್ಟು ಕೆಲಸ ಮಾಡುತ್ತ ಅವಳು ದಿನ ಕಳೆಯುತ್ತಿದ್ದಳು. ಯಾವಾಗ ಅವಳ ಮದುವೆ ಯಾಗಿತ್ತು, ಗಂಡ ಹೇಗಿದ್ದ, ಹೇಗೆ ಅವಳು ವಿಧವೆಯಾದಳು, ಏನೂ ಅವಳಿಗೆ ಗೊತ್ತಿರಲಿಲ್ಲ. ತುಸು ವಯಸ್ಸಿಗೆ ಬಂದಾಗ ಅವಳಿಗೆ ತಿಳಿದು ಬಂತು, ತಾನು ವಿಧವೆ; ತನಗೆ ಇನ್ನು ಮದುವೆಯಾಗುವಂತಿಲ್ಲ , ಸಂಸಾರದ ಸುಖಭೋಗಗಳೆಲ್ಲ ತನಗೆ ಇನ್ನು ಸಿಗುವಂತಿಲ್ಲ ಎಂದು. ಭಕ್ತರ ಸಾಮಾನು, ಹೊರೆಗಳನ್ನು ಸಾಗಿಸಲು ಆಕೆ ಶ್ರೀಮಾತೆಯವರ ಮನೆಗೆ ಬರುತ್ತಿದ್ದಳು. ಶ್ರೀಮಾತೆಗೆ ಅವಳ ಮೇಲೆ ಪ್ರೀತಿಯಿತ್ತು. ಕ್ರಮೇಣ ಅವಳು ತಾರುಣ್ಯಕ್ಕೆ ಬಂದಳು. ಒಬ್ಬ ಯುವಕನೊಂದಿಗೆ ಅವಳು ಅನೈತಿಕ ಸಂಬಂಧ ಹೊಂದಿದ ವಿಚಾರ ಎಲ್ಲೆಡೆ ಹರಡಿತು. ಹೃದಯವಿಹೀನರಾದ ಸಮಾಜದ ದೊಡ್ಡ ದೊಡ್ಡ ವ್ಯಕ್ತಿಗಳು ಇಲ್ಲಿಯ ತನಕ ಈ ಅನಾಥೆಯ ಬಗ್ಗೆ ಸ್ವಲ್ಪವೂ ತಲೆಕೆಡಿಸಿಕೊಂಡಿರಲಿಲ್ಲ. ಅವಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಯಾವುದೇ ವ್ಯವಸ್ಥೆ ಮಾಡಲಿಲ್ಲ. ಈಗ ಅವರ ತೀಕ್ಷ್ಣ ದೃಷ್ಟಿ ಈ ದುಃಖಿನಿಯ ಮೇಲೆ ಬಿದ್ದಿತು. ಆ ದೌರ್ಭಾಗ್ಯೆ ಅಪಮಾನ, ನಿಂದೆಗಳಿಗೆ ಒಳಗಾದಳು. ಶ್ರೀಮಾತೆ ಆ ಎಲ್ಲ ವಾರ್ತೆಯನ್ನು ಕೇಳಿ, ಆ ಹೆಣ್ಣುಮಗಳ ಭವಿಷ್ಯದ ಬಗ್ಗೆ ತುಂಬ ಚಿಂತಿಸತೊಡಗಿದರು ಹಾಗೂ ಅತ್ಯಂತ ದುಃಖಿತರಾದರು. ಆದರೆ ಭಗವಂತನ ಬಳಿ ಪ್ರಾರ್ಥಿಸುವುದನ್ನು ಬಿಟ್ಟು ಅವರು ಬೇರೆ ಏನು ತಾನೆ ಮಾಡಬಲ್ಲರು!

ಭಗವಂತನಿಗೆ ಕೊನೆಗೂ ಕರುಣೆಯುಂಟಾಯಿತು. ಶ್ರೀಮಾತೆಯವರ ಕೃಪೆಗೆ ಪಾತ್ರನಾದ, ಅವರ ಶಿಷ್ಯನ ಸ್ಥಾನದಲ್ಲಿದ್ದ ಒಬ್ಬಾತ ಜಮೀನ್ದಾರ ಅಲ್ಲಿ ಹಸ್ತಕ್ಷೇಪ ಮಾಡಿ ಅಲ್ಲಿ ನಡೆಯುತ್ತಿದ್ದ ಸಾಮಾಜಿಕ ಗೊಂದಲವನ್ನು ನಿಲ್ಲಿಸಿದ. ಅದನ್ನು ಕೇಳಿದ ಶ್ರೀಮಾತೆ ಸಮಾಧಾನ ಹೊಂದಿದರು. ಸ್ವಲ್ಪ ದಿನಗಳ ನಂತರ ಆ ಜಮೀನ್ದಾರ ಶಿಷ್ಯ ಶ್ರೀಮಾತೆಗೆ ಪ್ರಣಾಮ ಮಾಡಲು ಬಂದಾಗ, ಶ್ರೀಮಾತೆ ಸಂತಸಗೊಂಡು ಅವನನ್ನು ಆಶೀರ್ವಾದಿಸುತ್ತ ಹೇಳಿದರು, ''ಮಗೂ, ಆ ದೀನ ಹೆಣ್ಣುಮಗಳನ್ನು ಬದುಕಿಸಿಬಿಟ್ಟೆ; ಅವಳಿಗೆ ರಕ್ಷಣೆ ನೀಡಿದೆ. ಅದನ್ನು ಕೇಳಿ ನನ್ನ ಜೀವ ತಂಪಾಯಿತು ನೋಡು. ಭಗವಂತ ನಿನಗೆ ಮಂಗಳವನ್ನುಂಟುಮಾಡುತ್ತಾನೆ.''

ನಾವು ಯಾರನ್ನು ಅತ್ಯಂತ ಅಧಮರೆಂದು ತುಚ್ಛೀಕರಿಸುತ್ತೇವೋ, ಅವರನ್ನೂ ಪ್ರೀತಿಸಿ, ಅವರಿಗೆ ವಿಪತ್ತು ಬಂದೊದಗಿದಾಗ ಇಂತಹ ಸಹಾನುಭೂತಿ, ಇಂತಹ ಸ್ನೇಹವನ್ನು ಜಗಜ್ಜನನಿಯಲ್ಲದೆ, 'ಜನ್ಮ ಜನ್ಮಾಂತರಗಳ ಮಾತೆ'ಯಲ್ಲದೆ 'ಸತ್ಯವಂತರ ತಾಯಿ, ಅಸತ್ಯವಂತರ ತಾಯಿ' ಯಲ್ಲದೆ ಇನ್ನು ಯಾರಲ್ಲಿ ಕಾಣಬಹುದು!

ಗೃಹಸ್ಥ ಭಕ್ತರು ಸಂಸಾರದಲ್ಲಿ ನಿರಾಸಕ್ತಿ ಅಥವಾ ಅಸಡ್ಡೆ ತೋರಿಸುವುದು ಶ್ರೀಮಾತೆಗೆ ಇಷ್ಟವಾಗುತ್ತಿರಲಿಲ್ಲ. ಈ ಸಂಸಾರವೆಲ್ಲ ಭಗವಂತನದೇ; ಅವನು ನಮ್ಮನ್ನು ಎಲ್ಲಿ, ಯಾವ ಕೆಲಸದಲ್ಲಿ ನಿಯೋಜಿಸಿದ್ದಾನೋ, ಅಲ್ಲಿ ಅವನನ್ನೇ ಅವಲಂಬಿಸಿ, ಎಷ್ಟು ಸಾಧ್ಯವೋ ಅಷ್ಟು ಚೆನ್ನಾಗಿ ಕೆಲಸ ಮಾಡಲು ಪ್ರಯತ್ನಿಸುವುದೇ ನಮಗೆ ಎಂದೆಂದಿಗೂ ಶ್ರೇಯಸ್ಕರ ಎಂದು ಶ್ರೀಮಾತೆ ತಮ್ಮ ಶಿಷ್ಯಂದಿರಿಗೆಲ್ಲ ಕಲಿಸುತ್ತಿದ್ದರು. ತಮ್ಮ ಕರ್ತವ್ಯ ಪಾಲನೆಯಲ್ಲಿ ಆಸಕ್ತಿಯಿಲ್ಲದ ವ್ಯಕ್ತಿಗಳ ಬಗ್ಗೆ ಶ್ರೀಮಾತೆ ಅಸಮಾಧಾನ ವ್ಯಕ್ತಪಡಿಸುತ್ತ ಹೇಳುತ್ತಿದ್ದರು, ''ಠಾಕುರ್.. ಯಾವ ಶ್ರೀರಾಮಕೃಷ್ಣರಿಗೆ ತಮ್ಮ ಉಟ್ಟ ಬಟ್ಟೆಬರೆಯನ್ನು ಸರಿಯಾಗಿ ಇಟ್ಟುಕೊಳ್ಳಲಾಗುತ್ತಿರಲಿಲ್ಲವೋ, ಅವರಿಗೇ ನಮ್ಮ ಬಗ್ಗೆ ಎಷ್ಟೊಂದು ಚಿಂತೆ!''

ಒಂದು ಸಲ ಒಬ್ಬ ಭಕ್ತ ಶಿಷ್ಯ ಶ್ರೀಮಾತೆಗೆ ತುಂಬಾ ಬೆಲೆಬಾಳುವ ವಸ್ತ್ರವನ್ನು ಖರೀದಿಸಿ ಕೊಡಲು ವಿಶೇಷವಾಗಿ ಒತ್ತಾಯಿಸಿದಾಗ ಶ್ರೀಮಾತೆ ಅದಕ್ಕೊಪ್ಪದೆ, ''ನಿನಗೆ ಹಣ ಖರ್ಚು ಮಾಡಲೇಬೇಕೆಂಬ ಒತ್ತಾಯವಿದ್ದರೆ, ಒಂದಳತೆಯ ಧಾನ್ಯ ಬೆಳೆಯುವ ಜಮೀನು ಖರೀದಿ ಮಾಡಿಕೊಡು. ಅದು ಸಾಧುಗಳ, ಭಕ್ತರ ಸೇವೆಗೆ ವಿನಿಯೋಗವಾದೀತು'' ಎಂದರು. ಆ ಭಕ್ತ ಹಣ ಕೊಟ್ಟಾಗ ಒಂದು ತುಂಡು ಜಮೀನು ಕೊಂಡುಕೊಳ್ಳುವ ಮಾತುಕತೆ ಬಂತಾದರೂ, ಅದರ ಮಾಲೀಕ ಮನಸ್ಸು ಬದಲಾಯಿಸಿದ್ದರಿಂದ ಆ ಜಮೀನನ್ನು ಕೊಂಡುಕೊಳ್ಳಲಾಗಲಿಲ್ಲ. ಶ್ರೀಮಾತೆ ಈ ವಿಷಯವಾಗಿ ಒಬ್ಬ ಶಿಷ್ಯನಿಗೆ ಹೇಳಿದರು: ''ಮಗೂ, ಈಗಂತೂ ಜಮೀನು ಕೊಂಡುಕೊಳ್ಳಲಾಗಲಿಲ್ಲ. ಹಣವನ್ನು ಇಟ್ಟುಕೊಂಡರೆ ಎಲ್ಲವೂ ಖರ್ಚಾಗಿಹೋಗುವುದು. ಅದಕ್ಕಾಗಿ ಹಣವನ್ನೆಲ್ಲ ಕೋಯಲ್‌ಪಾರಾ ಕೇದಾರನ ಬಳಿಗೆ ಕಳುಹಿಸಿಕೊಟ್ಟಿದ್ದೇನೆ — ಅವನು ಧಾನ್ಯ ಖರೀದಿಸಿ ಇಟ್ಟುಕೊಳ್ಳಲಿ ಅಂತ. ಈಗ ಧಾನ್ಯ ತುಂಬ ಅಗ್ಗ. ಅಗತ್ಯಬಿದ್ದಾಗ ಧಾನ್ಯ ಮಾರಿದರೆ, ಅದರಿಂದ ಹಣ ಬೇಕಾದರೂ ಬರಬಹುದು.'' ಜಮೀನು ಬೇಕಾದ ರೀತಿಯಲ್ಲಿ ಸಿಗಲಿಲ್ಲ ; ಹಾಗಾಗಿ ಖರೀದಿಮಾಡಲಾಗಲಿಲ್ಲ. ಆದರೆ ಸ್ವಲ್ಪ ಸಮಯದ ನಂತರ, ಖರೀದಿಸಿದ ಧಾನ್ಯವನ್ನು ಉಪಯೋಗಿಸುವ ಕಾಲಕ್ಕೆ ಅದರ ಬೆಲೆ ನಾಲ್ಕು ಪಟ್ಟು ಹೆಚ್ಚಾಗಿಬಿಟ್ಟಿತ್ತು.

ಜಯರಾಮಬಾಟಿಯಲ್ಲಿ ಹೊಸ ಮನೆ ಕಟ್ಟಿದ ಮೇಲೆ, ಗ್ರಾಮ ಪಂಚಾಯತು ಅದರ ಮೇಲೆ ಚೌಕೀದಾರನ ತೆರಿಗೆಯನ್ನು ವಿಧಿಸಿತು. ಮೊದಲ ವರ್ಷ ಶ್ರೀಮಾತೆಯವರ ಅನುಪಸ್ಥಿತಿಯಲ್ಲಿ ಅಲ್ಲಿದ್ದ ಸೇವಕ, ಬ್ರಹ್ಮಚಾರಿ ಜ್ಞಾನಾನಂದ ವಾರ್ಷಿಕ ತೆರಿಗೆ ನಾಲ್ಕು ರೂಪಾಯಿ ಕೊಟ್ಟಿದ್ದ. ಮುಂದಿನ ವರ್ಷ ಶ್ರೀಮಾತೆ ಜಯರಾಮಬಾಟಿಯಲ್ಲಿದ್ದರು. ತೆರಿಗೆ ಸಂಗ್ರಹ ಮಾಡಲು ಬಂದಾಗ ತೆರಿಗೆಯನ್ನು ರದ್ದುಗೊಳಿಸಲು ಪ್ರಯತ್ನಿಸುವಂತೆ

ಅಲ್ಲಿದ್ದ ಸೇವಕನಿಗೆ[೧] ಶ್ರೀಮಾತೆ ಆದೇಶಿಸಿದರು. ಅವರು ಹೇಳಿದರು, ''ಈಗಂತೂ ನಾನು ಇಲ್ಲಿದ್ದೇನೆ. ತೆರಿಗೆಯ ಹಣವನ್ನು ಕೊಟ್ಟುಬಿಡುತ್ತಿದ್ದೆ. ಆದರೆ ಮುಂದೆ ಇಲ್ಲಿ ಸಾಧು ಬ್ರಹ್ಮಚಾರಿಗಳು ವಾಸವಾಗಿರುತ್ತಾರೆ; ಅವರಿಗೆ ಬಹುಶಃ ಭಿಕ್ಷೆ ಬೇಡಿ ಊಟ ಮಾಡಬೇಕಾಗಿ ಬಂದೀತು. ಅವರಿಗೆ ಎಲ್ಲಿಂದ ಹಣ ಸಿಗುತ್ತದೆ? ತೆರಿಗೆ ರದ್ದು ಮಾಡಲಾಗುತ್ತದೋ ಪ್ರಯತ್ನ ಮಾಡಿನೋಡು.'' ಅದಕ್ಕಾಗಿ ಶ್ರೀಮಾತೆ ತುಂಬ ಒತ್ತಾಯದಿಂದ ತಮ್ಮ ಹೆಸರಲ್ಲೇ ಒಂದು ಪತ್ರ[೨] ಬರೆದು, ತಮ್ಮ ಶಿಷ್ಯನನ್ನು ಯೂನಿಯನ್ ವಾರ್ಡ್‌ನ ಅಧ್ಯಕ್ಷರ ಬಳಿಗೆ ಕಳುಹಿಸಿದರು. ಆ ವರ್ಷ ತೆರಿಗೆ ಕೊಡಬೇಕಾಗಿ ಬಂದಿತ್ತಾದರೂ, ಮುಂದಿನ ವರ್ಷಕ್ಕೆ ತೆರಿಗೆ ವಿನಾಯತಿಯ ಭರವಸೆ ಲಭಿಸಿತು. ಮುಂದಿನ ಬಾರಿ ಶ್ರೀಮಾತೆ ಸರಿಯಾದ ಸಮಯದಲ್ಲಿ ತಮ್ಮ ಒಬ್ಬ ಶಿಷ್ಯನನ್ನು ಕಳುಹಿಸಿ ಎಲ್ಲವನ್ನು ಅನ್ವೇಷಣೆ ಮಾಡಿಸಿದರು. ಹೀಗೆ ತೆರಿಗೆ ರದ್ದುಗೊಂಡಿತು

ಜಯರಾಮಬಾಟಿಯಲ್ಲಿ ಅಂಚೆನೌಕರ ಮನಿ ಆರ್ಡರನ್ನು ತಂದುಕೊಡುತ್ತಿದ್ದ. ಶ್ರೀಮಾತೆ ಹೆಬ್ಬೆಟ್ಟು ಸಹಿ ಹಾಕುತ್ತಿದ್ದರು. ಬೇರೆ ಯಾರಾದರೂ ಬರೆದು ಕೊಡುತ್ತಿದ್ದರು — 'ಶ್ರೀಶಾರದಾ ದೇವಿಯವರ ಹೆಬ್ಬೆಟ್ಟು ಗುರುತು....' ಅಂಚೆ ನೌಕರ ಹಣವನ್ನು ಎಣಿಸಿ ಕೊಡುತ್ತಿದ್ದ. ಶ್ರೀಮಾತೆ ಹಣವನ್ನು ಮುಷ್ಟಿಯೊಳಗಿಟ್ಟುಕೊಂಡು ತಮ್ಮ ಕೋಣೆಗೆ ತೆಗೆದುಕೊಂಡು ಹೋಗಿ ಅಲ್ಲಿ ಇಡುತ್ತಿದ್ದರು. ನೌಕರನಿಗೆ ಅವರು ಪ್ರಸಾದ ಕೊಟ್ಟು , ಮೃದುವಾದ ಮಾತುಗಳನ್ನಾಡಿ ಕಳುಹಿಸಿಕೊಡುತ್ತಿದ್ದರು. ಎಷ್ಟು ಹಣ ಬಂತು, ಯಾರು ಕಳುಹಿಸಿಕೊಟ್ಟಿದ್ದಾರೆ ಎಂದು ಯಾರಿಗೂ ತಿಳಿಯುತ್ತಿರಲಿಲ್ಲ. ಅನಂತರ ಸಮಯ ಸಿಕ್ಕಿದಾಗ ಯಾರಿಂದಲಾದರೂ ಶ್ರೀಮಾತೆ ಪತ್ರ ಬರೆಸಿ, ಹಣ ತಲುಪಿದ ವಿಷಯವಾಗಿ ಬರೆದು, ತಮ್ಮ ಆಶೀರ್ವಾದವನ್ನು ತಿಳಿಸುತ್ತಿದ್ದರು. ಸೇವಕರು ಯಾರಾದರೂ ಇದ್ದರೂ ಕೂಡ, ಮನಿ ಆರ್ಡರ್ ಸ್ವೀಕಾರ ಮಾಡಿದ ನಂತರ ಹಣವನ್ನು ಎಣಿಸುವುದು, ಕೈಯಲ್ಲಿಟ್ಟುಕೊಂಡು ಸದ್ದು ಮಾಡುವುದು ಇವನ್ನೆಲ್ಲ ಶ್ರೀಮಾತೆ ನಿಷೇಧಿಸುತ್ತ ಹೇಳುತ್ತಿದ್ದರು, ''ಮಗೂ, ಹಣದ ಸದ್ದು ಕೇಳಿದರೂ ಕೂಡ ಬಡವನ ಮನಸ್ಸಿನಲ್ಲಿ ಆಸೆ ಹುಟ್ಟುವುದು. ಹಣ ಎಂಥ ವಸ್ತುವೆಂದರೆ, ಅದನ್ನು ನೋಡಿದರೆ ಸಾಕು, ಮರದ ಬೊಂಬೆ ಕೂಡ 'ಹಾಂ' ಎನ್ನುವುದು.''

ಸ್ವಾಮೀಜಿ ರಾಮಕೃಷ್ಣ ಮಿಷನ್ ಆರಂಭಿಸಿ ಸಂನ್ಯಾಸಿಗಳು ಸೇವಾಕಾರ್ಯಗಳನ್ನು ಆರಂಭಿಸಿದ್ದು ಶ್ರೀರಾಮಕೃಷ್ಣರ ಆದರ್ಶಗಳಿಗೆ ಅನುಗುಣವಾಗಿದೆಯೇ ಇಲ್ಲವೇ ಎಂಬ ಸಂಶಯ ಆರಂಭದಲ್ಲಿ ಹಲವರಿಗೆ ಎದ್ದಿತ್ತು. ಕೆಲವರಂತೂ ಶ್ರೀಮಾತೆಯವರಲ್ಲಿ ಈ ಸಂಬಂಧವಾಗಿ ಹಲವು ಬಾರಿ ಪ್ರಶ್ನಿಸಿದ್ದರು. ಶ್ರೀಮಾತೆ ಯಾವಾಗಲೋ ಒಮ್ಮೆ ಹೇಳಿದ್ದರು: ''ಇದೆಲ್ಲವೂ ಶ್ರೀರಾಮಕೃಷ್ಣರ ಕೆಲಸವೇ.'' ಅಂತೆಯೇ ಇನ್ನೊಂದು ಬಾರಿ ಹೇಳಿದ್ದರು: ''ಮಗೂ, ನೀವೆಲ್ಲ ಕೆಲಸ ಮಾಡಿ ಊಟ ಮಾಡಬೇಕು. ಕೆಲಸ ಮಾಡದಿದ್ದರೆ ಯಾರು ಊಟ ಹಾಕುತ್ತಾರೆ? ಬಿಸಿಲಲ್ಲಿ ಭಿಕ್ಷೆಗಾಗಿ ಅಲೆದಾಡುತ್ತ ತಲೆತಿರುಗಬಹುದು. ಚೆನ್ನಾಗಿ ಊಟ ಮಾಡಲು ಆಹಾರ ಸಿಗದೆ ಹೋದರೆ ದೇಹ ಅನಾರೋಗ್ಯಕ್ಕೆ ಈಡಾಗುವುದು. ನೀವು ಆ ಮಾತುಗಳನ್ನೆಲ್ಲ ಕೇಳಬೇಡಿ, ಕೆಲಸ ಮಾಡಿ, ಚೆನ್ನಾಗಿ ಊಟ ಮಾಡಿ, ಭಗವಂತನ ಸಾಧನೆ, ಭಜನೆ ಮಾಡಿ.''

ಶ್ರೀಮಾತೆ ಜಪಧ್ಯಾನ ಮಾಡಲು ಎಷ್ಟೊಂದು ಪ್ರೋತ್ಸಾಹ ನೀಡುತ್ತಿದ್ದರೋ, ಅದೇ ರೀತಿ ಮಿತಿಮೀರಿ ಜಪ, ಧ್ಯಾನ ಮಾಡಿ

---

[೧] ಸ್ವತಃ ಲೇಖಕರು.

[೨] ಈ ಸಂಬಂಧವಾಗಿ ಪ್ರಬೋಧಚಂದ್ರ ಚಟ್ಟೋಪಾಧ್ಯಾಯನಿಗೆ ಶ್ರೀಮಾತೆ ಬರೆದ ಒಂದು ಪತ್ರ ಹೀಗಿದೆ:

ಜಯರಾಮಬಾಟಿ

೧೩೨೪(ಬಂಗಾಳಿ ವರ್ಷ), ಚೈತ್ರ ೫ನೇ ದಿನ

ಶ್ರೀ ಶ್ರೀ ಗುರುದೇವ

ಆಶೀರ್ವಾದಗಳ ನಂತರ ಸಮಾಚಾರವೇನೆಂದರೆ,

ಮಗೂ, ನಿನಗೆ ಬಹುಶಃ ಈ ವಿಷಯ ತಿಳಿದಿರಬಹುದು — ನಮ್ಮ ಮನೆಗೋಸ್ಕರ ೪ (ನಾಲ್ಕು) ರೂಪಾಯಿ ಚೌಕೀದಾರಿ ಟ್ಯಾಕ್ಸ್ ವಿಧಿಸಲ್ಪಟ್ಟಿದೆ. ಇದು ಅತ್ಯಂತ ಹೆಚ್ಚಿನದು ಎಂದು ನಮಗನ್ನಿಸಿದ್ದರಿಂದ, ನಿನ್ನೆ ಒಂದು ಪತ್ರದೊಂದಿಗೆ ಶ್ರೀಮಾನ್ ಗೋಪೇಶ್‌ನನ್ನು (ಈ ಸ್ಮೃತಿಚಿತ್ರದ ಲೇಖಕರು) ಶ್ರೀಯುತ ಶಂಭುಬಾಬುವಿನ ಬಳಿಗೆ ಕಳುಹಿಸಿದ್ದೆ. ಪತ್ರದಲ್ಲಿ ಬರೆದಿದ್ದೆ, ಈ ಮನೆಯನ್ನು ದೇವರ ಆಸ್ತಿಯೆಂದು ಪರಿಗಣಿಸಿದ್ದರಿಂದ ಅದರೊಂದಿಗೆ ನನಗೆ ವಿಶೇಷ ಸಂಬಂಧವೇನೂ ಇಲ್ಲ. ನಾನು ಇಲ್ಲಿ ಸ್ಥಿರವಾಗಿ ವಾಸವಾಗಿರುವ ವ್ಯಕ್ತಿಯಲ್ಲ. ಮನೆಗಾದರೂ ಸ್ವಲ್ಪವೂ ವರಮಾನವಿಲ್ಲ. ಇಲ್ಲಿ ವಾಸ ಮಾಡುವ ಸಂನ್ಯಾಸಿ, ಬ್ರಹ್ಮಚಾರಿ, ಸೇವಕರೆಲ್ಲ ಇಲ್ಲಿದ್ದುಕೊಂಡು ತಮ್ಮ ಜೀವನ ನಿರ್ವಹಣೆ ಮಾಡುವುದು ಅಸಾಧ್ಯವಾದೀತು. ಈ ಪರಿಸ್ಥಿತಿಯಲ್ಲಿ ಈ ರೀತಿಯ ದೊಡ್ಡ ಹೊರೆಯನ್ನು ಶಾಶ್ವತವಾಗಿ ಭರಿಸುವುದು ನಮಗೆ ಅಸಾಧ್ಯ. ನಮ್ಮ ಭಕ್ತರುಗಳು ಯಾವಾಗ ಏನನ್ನಾದರೂ ನೀಡುತ್ತಾರೋ, ಅದರಿಂದ ಭಗವಂತನ ಇಚ್ಛೆಯಂತೆ ಯಾವುದೋ ರೀತಿಯಲ್ಲಿ ನಮ್ಮ ಜೀವನ ನಡೆಯುತ್ತ ಹೋಗುವುದಷ್ಟೆ. ಆದರೆ ನಮಗೆ ಯಾವುದೇ ರೀತಿಯ ವರಮಾನವಿಲ್ಲ — ಇತ್ಯಾದಿ ಬರೆದಿದ್ದೆ.

ಶಂಭುಬಾಬು ಇದಕ್ಕೆ ಉತ್ತರವಾಗಿ ಹೇಳಿದ್ದೇನೆಂದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಅವನು ನಿನಗೆ ಹೇಳಿದ್ದಾನೆ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಒಂದು ದರಖಾಸ್ತು ದೂರು ಸಲ್ಲಿಸುವುದಕ್ಕಾಗಿ. ಈ ಸಂಬಂಧವಾಗಿ ನೀನು ಏನಾದರೂ ಮಾಡಿದ್ದೀಯೋ ಇಲ್ಲವೋ ಗೊತ್ತಿಲ್ಲ. ಈ ಪತ್ರವನ್ನೋದಿ ನಿನಗೆ ಇದು ಮನವರಿಕೆಯಾಗುವುದು ಎಂದು ಭಾವಿಸಿದ್ದೇನೆ. ಅದರಿಂದ ನೀನು ಅದನ್ನು ನೆನಪಿನಲ್ಲಿಟ್ಟುಕೊಂಡು ತಕ್ಕುದಾದದ್ದನ್ನು ಮಾಡಬೇಕು. ಶಂಭು ರಾಯ್ ಹೇಳಿದ್ದ, ದೂರಿನಲ್ಲಿ ಉಲ್ಲೇಖವಿರಬೇಕು — ಇದು ಒಂದು Religious Institution — ಇದಕ್ಕೆ ಸ್ವಲ್ಪವೂ ವರಮಾನವಿಲ್ಲ ಎಂದು. ಸಹೃದಯರಾದ ಜನರು ನೀಡಿದ ಸಹಾಯದಿಂದ ಅದು ನಡೆದುಕೊಂಡು ಹೋಗುತ್ತಿದೆ. ಇಲ್ಲಿ ಎಲ್ಲರ ಕುಶಲವಾರ್ತೆಯೊಂದಿಗೆ ನನ್ನ ಆಶೀರ್ವಾದವನ್ನು ತಿಳಿಸುತ್ತಿದ್ದೇನೆ.

ಆಶೀರ್ವಾದಗಳೊಂದಿಗೆ, ನಿನ್ನ ಮಾತಾ ಠಾಕೂರಾಣಿ

*('ಉದ್ಬೋಧನ', ೪೦ನೇ ವರ್ಷ, ಪು.೨೨೮ )*

ಪತ್ರದ ಇನ್ನೊಂದು ಪುಟದಲ್ಲಿ ಸ್ವಾಮಿ ಶಾರದೇಶಾನಂದರು ಶ್ರೀಮಾತೆಯವರ ಸೂಚನೆಯಂತೆ ಪ್ರಬೋಧ ಬಾಬುವಿಗೆ ಬರೆದಿದ್ದರು: ''ಪತ್ರವನ್ನು ಬರೆದು ಶ್ರೀಮಾತೆಗೆ ಓದಿ ಹೇಳುವಾಗ (ಶ್ರೀಮಾತೆ) ಹೇಳಿದರು — ಏನು ಮಾಡಿದರೆ ಟ್ಯಾಕ್ಸನ್ನು ರದ್ದುಗೊಳಿಸಲಾಗುವುದೋ ಅದನ್ನು ನೀನು ಮಾಡಲೇಬೇಕಾಗುವುದು.''

*('ಉದ್ಬೋಧನ', ೮೩ ನೇ ವರ್ಷ,ಪು.೫೯೧) –ಸಂ*

ತಲೆ ಬಿಸಿಯಾಗದಂತೆ ಕೂಡ ಎಚ್ಚರಿಕೆ ವಹಿಸಿ, ಎಷ್ಟು ಬೇಕೋ ಅಷ್ಟು ಮಾತ್ರ ಸಾಧನೆ ಮಾಡುವಂತೆ ಜಾಗರೂಕತೆ ವಹಿಸಲೂ ಹೇಳುತ್ತಿದ್ದರು. ಆಧ್ಯಾತ್ಮಿಕವಾಗಿ ಕಠೋರ ಸಾಧನೆ ಮಾಡುವುದನ್ನು ಅವರು ನಿಷೇಧಿಸಿದ್ದರು. ಅದೇ ರೀತಿ ಆಹಾರ, ಉಡುಗೆ ತೊಡುಗೆಗಳಲ್ಲೂ ಸಂಯಮವಿಲ್ಲದೆ ಸೊಗಸು ಮಾಡುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಶ್ರೀರಾಮಕೃಷ್ಣರ ದೇಹತ್ಯಾಗವಾದ ನಂತರ ಅವರ ಸಂನ್ಯಾಸೀ ಶಿಷ್ಯಂದಿರು ಊಟ, ವಸತಿಗಳಿಗಾಗಿ ಪಡಬೇಕಾಗಿ ಬಂದ ಕಷ್ಟ, ಬಡತನ, ಅಭಾವ ಇವನ್ನೆಲ್ಲ ಕಂಡು ಶ್ರೀಮಾತೆ ಅತ್ಯಂತ ಸಂಕಟಪಟ್ಟರು.

ಬೋಧಗಯೆಯ ಬೌದ್ಧಮಠದ ಸಂಪತ್ತು, ಸಾಧುಗಳ ಸುಖ, ಅನುಕೂಲತೆಗಳನ್ನೆಲ್ಲ ಕಂಡು, ತಮ್ಮ ಭಿಕಾರಿ ಪರಿವ್ರಾಜಕ ಶಿಷ್ಯಂದಿರ ಚಿತ್ರ ಶ್ರೀಮಾತೆಯವರ ಕಣ್ಣ ಮುಂದೆ ಬಂದು, ಅವರು ಅಳುತ್ತ ದುಃಖಿಸತೊಡಗಿದರು. ಶ್ರೀರಾಮಕೃಷ್ಣರಲ್ಲಿ ಅವರ ಶಿಷ್ಯಂದಿರಿಗಾಗಿ ಶ್ರೀಮಾತೆ ಅತ್ತು ಪ್ರಾರ್ಥಿಸಿದರು. ಪೂಜನೀಯ ಯೋಗಿನ್ ಮಾ ಒಂದು ದಿನ ಇದನ್ನು ಕುರಿತು ನನಗೆ ಹೇಳಿದರು: ''(ಮಠ-ಆಶ್ರಮ ಇತ್ಯಾದಿ) ಈಗ ಏನನ್ನು ನೋಡುತ್ತಿದ್ದೀವೋ ಅದೆಲ್ಲವೂ ಅವರ (ಶ್ರೀಮಾತೆಯವರ) ಕೃಪೆಯಿಂದಾಗಿಯೇ ಆದದ್ದು. ಎಲ್ಲಿ ಏನು ನೋಡಿದರೂ ಸರಿ — ಅದು ಕಲ್ಲಿನ ವಿಗ್ರಹವಾಗಿರಲಿ, ದೇವತೆಯ ಮೂರ್ತಿಯಾಗಿರಲಿ, ಅವರು ಅಳುತ್ತ, 'ಪ್ರಭು! ನನ್ನ ಮಕ್ಕಳಿಗೆ ಮಲಗಿಕೊಳ್ಳುವುದಕ್ಕಾಗಿ ಒಂದು ಜಾಗ ದೊರಕಿಸಿಕೊಡು, ಎರಡು ಹೊತ್ತು ಊಟ ಮಾಡುವುದಕ್ಕಾಗಿ ಒಂದು ವ್ಯವಸ್ಥೆ ಮಾಡು' ಅಂತ ಪ್ರಾರ್ಥಿಸುತ್ತಿದ್ದರು, ಶ್ರೀಮಾತೆಯವರ ಈ ಹಂಬಲ ಪೂರೈಸಿತು.''

ಜಯರಾಮಬಾಟಿಯಲ್ಲಿ ಶ್ರೀಮಾತೆ ಅನೇಕ ಮಂದಿ ಶಿಷ್ಯಂದಿರಿಗೆ ತಮ್ಮ ಕೈಯಿಂದಲೇ ಕಾವಿ ಬಟ್ಟೆ ನೀಡಿ ಸಂನ್ಯಾಸದೀಕ್ಷೆ ನೀಡಿದ್ದನ್ನು ಕಂಡು ಅನೇಕ ಮಂದಿ ಹೆಣ್ಣುಮಕ್ಕಳ ಹೃದಯ ಆತಂಕ, ಶೋಕಗಳಿಂದ ವಿಹ್ವಲಗೊಳ್ಳುತ್ತಿತ್ತು. ಶ್ರೀಮಾತೆಯವರ ಹೃದಯ ಅರಳಿ ಅವರು ನಗುತ್ತಿದ್ದರು — ತಮ್ಮ ಒಬ್ಬ ಶಿಷ್ಯ ಸಂಸಾರದ ಭೀಕರ ಜ್ವಾಲೆಯಿಂದ ಪಾರಾದ ಎಂದು ಭಾವಿಸಿ. ಶ್ರೀಮಾತೆ ತಮ್ಮ ಸಂಸಾರಿ ಶಿಷ್ಯಂದಿರನ್ನು ಹಣಗಳಿಕೆ, ವಿವಾಹ ಹಾಗೂ ಗೃಹಸ್ಥ ಜೀವನ ನಿರ್ವಹಣೆಗಳ ವಿಷಯದಲ್ಲಿ ನಿರುತ್ಸಾಹಗೊಳಿಸಿದಿದ್ದರೂ, ತಮ್ಮ ಸಂನ್ಯಾಸಿ ಶಿಷ್ಯಂದಿರಿಗೆ ತ್ಯಾಗ ಜೀವನದ ದಾರಿಯನ್ನು ಅತ್ಯಂತ ಉತ್ಸಾಹದಿಂದ ತೋರಿಸಿಕೊಡುತ್ತಿದ್ದರು.

ಶ್ರೀಮಾತೆಯವರ ಶಿಷ್ಯರೊಬ್ಬರು ಹೀಗೆ ಬರೆದಿದ್ದಾರೆ: ''ಅವರು (ಶ್ರೀಮಾತೆಯವರ ಒಬ್ಬ ಶಿಷ್ಯ) ವಿವಾಹವಾಗದೆ ತ್ಯಾಗ ಪಥದಲ್ಲೇ ಜೀವನವನ್ನು ಕಳೆಯಬಯಸಿದ್ದರು. ಆದರೆ ಅವರ ತಂದೆ ಇದರ ತೀವ್ರ ವಿರೋಧವಾಗಿದ್ದರು. ನಾನಾ ಉಪಾಯಗಳಿಂದ ಅವನನ್ನು ಸಂಸಾರದಲ್ಲಿ ಮುಳುಗಿಸಲು ಪ್ರಯತ್ನಿಸಿದ್ದರು. ಮಗನ ಕರುಣಾಪೂರ್ಣವಾದ ಬಯಕೆಯನ್ನು ಕೇಳಿ ಶ್ರೀಮಾತೆಯವರ ಹೃದಯ ಕರಗಿತು. ಕಣ್ಣೀರುತುಂಬಿ ಅವರು ಹೇಳಿದರು, 'ನೋಡು, ನೋಡು; ತಂದೆಯಾಗಿ ಅವನು ಮಕ್ಕಳ ತಲೆಯ ಮೇಲೆ ಕೊಡಲಿಯೇಟು ಹಾಕಲು ನೋಡುತ್ತಿದ್ದಾನೆ, ಮಕ್ಕಳ ಸರ್ವನಾಶ ಮಾಡಬಯಸುತ್ತಿದ್ದಾನೆ. ಮಗ ದುಃಖದಿಂದ ಪತ್ರ ಬರೆದಿದ್ದಾನೆ.' ಶ್ರೀಮಾತೆ ತಮ್ಮ ಪುತ್ರನಿಗೆ ಭರವಸೆ ನೀಡಿ, ಆಶೀರ್ವಾದ ನೀಡುತ್ತ ಉತ್ತರ ಬರೆದರು. ಅವರ ಕೃಪೆಯಿಂದ ಅವನ ಆಪತ್ತುಗಳೆಲ್ಲ ನಿವಾರಣೆಗೊಂಡವು. ನಿಧಾನವಾಗಿ ಅವನ ತಂದೆಯ ಮನಸ್ಥಿತಿ ಬದಲಾಯಿತು. ತನ್ನ ಮಗನ ಮೇಲೆ ಅವರಿಗೆ ಪ್ರೀತಿಯುಂಟಾಗಿ, ಧರ್ಮಪಥದಲ್ಲಿ ಅವನು ಮುನ್ನಡೆಯಲು ಸಹಾಯಕರಾದರು. ಮಗನೂ ಕೂಡ ತನ್ನ ಪ್ರಾಣವನ್ನೇ ಪಣವಾಗಿಟ್ಟುಕೊಂಡು, ತನ್ನ ವೃದ್ಧ ತಂದೆಯ ಸೇವೆ ಮಾಡುತ್ತ ಅವರ ಕೊನೆಗಾಲದಲ್ಲಿ ಅವರ ಆಂತರಿಕ ಪ್ರೀತಿ, ಆಶೀರ್ವಾದಗಳನ್ನು ಪಡೆದ.''

ಒಂದು ಸಲ ಒಬ್ಬ ವೃದ್ಧ ಬ್ರಾಹ್ಮಣ ಶ್ರೀಮಾತೆಗೆ ಪತ್ರ ಬರೆದಿದ್ದ: ಅವನು ತನ್ನ ಮಗನನ್ನು ಸಾಕಿ ಸಲಹಿ, ವಿದ್ಯಾಭ್ಯಾಸ ನೀಡಿ ದೊಡ್ಡವನನ್ನಾಗಿ ಮಾಡಿದ್ದ, ಮುದಿ ವಯಸ್ಸಿನಲ್ಲಿ ಅವನು ತನಗೆ ಅನ್ನಾಹಾರ ನೀಡಿ ನೋಡುಕೊಳ್ಳುತ್ತಾನೆ ಎಂದು ಭಾವಿಸಿದ್ದ. ಆದರೆ ಅವನು ಕೆಲವು ದಿನಗಳ ಮುನ್ನ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದ, ಈಗ ಅವನು ತಾಯಿತಂದೆಯರನ್ನು ಬಿಟ್ಟು ಸಂನ್ಯಾಸಿಯಾಗಬೇಕೆಂದು ಒಂದು ಆಶ್ರಮಕ್ಕೆ ಹೋಗಿಬಿಟ್ಟಿದ್ದ. ಅವನ ತಾಯಿ ದುಃಖದಿಂದ ಹಾಸಿಗೆ ಹಿಡಿದಿದ್ದಳು. ತಾನೂ ವೃದ್ಧನಾಗಿದ್ದಾನೆ, ಬೇರೇನೂ ಇಲ್ಲ, ಅವನಿಗೆ ಬರೀ ಕತ್ತಲು ಮಾತ್ರ ಕಾಣಿಸುತ್ತಿದೆ. ಅವನು ಪತ್ರದಲ್ಲಿ ಅತ್ಯಂತ ಕರುಣೆಯ ಭಾಷೆಯಲ್ಲಿ ತನ್ನ ದುಃಖದ ಕಥೆಯನ್ನು ನಿವೇದಿಸಿಕೊಂಡಿದ್ದ. ತನ್ನ ಮಗನನ್ನು ಮರಳಿ ಪಡೆಯಲು ಪ್ರಾರ್ಥಿಸಿಕೊಂಡಿದ್ದ. ಪತ್ರವನ್ನು ಕೇಳಿ ತಿಳಿದ ಶ್ರೀಮಾತೆ ತುಂಬಾ ಖೇದಗೊಂಡು ಹೇಳತೊಡಗಿದರು: ''ಅಯ್ಯೋ, ಪಾಪ! ಆ ವೃದ್ಧ ಬ್ರಾಹ್ಮಣ ನನ್ನ ಮೇಲೆ ಅಷ್ಟೊಂದು ಶಾಪ ಹಾಕುತ್ತಾನೆ ಅಂತ ನನಗೆ ಗೊತ್ತಾಗಲಿಲ್ಲವಲ್ಲ! ಹಾಗೇ ಮಾಡಬೇಕಲ್ಲವೇ ಅವನು? ಎಷ್ಟೊಂದು ಕಷ್ಟಪಟ್ಟು, ಏನೆಲ್ಲ ನಿರೀಕ್ಷೆಗಳನ್ನಿಟ್ಟುಕೊಂಡು ಅವನು ಆ ಹುಡುಗನನ್ನು ಬೆಳೆಸಿದ್ದಾನೆ! ಈಗ ಅವನು ಇದ್ದಕ್ಕಿದಂತೆ ಓಡಿಹೋಗಿಬಿಟ್ಟ!'' ಆ ವೃದ್ಧ ಬ್ರಾಹ್ಮಣನಿಗೆ ಸಾಂತ್ವನವುಂಟಾಗುವಂತೆ ಪತ್ರ ಬರೆಸಿದರು ಶ್ರೀಮಾತೆ. ಈ ವಿಷಯದಲ್ಲಿ ತನಗೇನೂ ಗೊತ್ತಿರಲಿಲ್ಲವೆಂದು ಶ್ರೀಮಾತೆ ತಿಳಿಸಿದರು. ಹುಡುಗನಂತೂ ಅವರಿಗೆ ಏನೂ ಹೇಳಿರಲಿಲ್ಲ. ಅವನು ತನ್ನ ಇಚ್ಛೆಯಿಂದಲೇ ಸಾಧುವಾಗಿದ್ದ. ಶ್ರೀಮಾತೆಯಾದರೂ ಏನು ಮಾಡಿಯಾರು? ಇದರಲ್ಲಿ ಅವರದೇನೂ ಕೈವಾಡವಿರಲಿಲ್ಲ. ಭಗವಂತನನ್ನು ಕಾತರತೆಯಿಂದ ಪ್ರಾರ್ಥಿಸುವಂತೆ ಆ ವೃದ್ಧನಿಗೆ ಪತ್ರದಲ್ಲಿ ತಿಳಿಸಿದರು. ಭಗವಂತ ನಿಜವಾಗಿಯೂ ಅವರನ್ನು ರಕ್ಷಿಸುವನೆಂದೂ, ಆದ್ದರಿಂದ ಅವನು ಅನಗತ್ಯ ಚಿಂತೆಯನ್ನು ತ್ಯಜಿಸಬೇಕೆಂದೂ ತಿಳಿಸಿದರು. ಅನಂತರ ಶ್ರೀಮಾತೆ ಆ ಪತ್ರವನ್ನು ಬರೆದು ಕೊಟ್ಟವನಿಗೆ [೩] ಹೇಳಿದರು: ''ಮಗೂ! ಈ ಹುಚ್ಚುಹುಡುಗರು ಹೀಗೇಕೆ ಇದ್ದಕ್ಕಿದ್ದಂತೆ ಮಾಡುತ್ತಾರೆ? ತಂದೆ, ತಾಯಿಗೆ ಕಷ್ಟಕೊಟ್ಟು, ತಾನೂ ಕಷ್ಟ ಅನುಭವಿಸುತ್ತಾರೆ? ಸ್ವಲ್ಪಕಾಲ ಆಶ್ರಮಕ್ಕೆ ಬಂದು ಹೋಗುತ್ತಿರಬೇಕು, ಸ್ವಲ್ಪಕಾಲ ಸಾಧುಸಂಗ ಮಾಡುತ್ತಿರಬೇಕು. ಇವನ್ನೆಲ್ಲ ನೋಡುತ್ತ ತಾಯಿ, ತಂದೆಯರಿಗೆ ಎಲ್ಲವನ್ನೂ ಸಹಿಸುವುದು ಸಾಧ್ಯ

೩. ಸ್ವತಃ ಲೇಖಕರು. (-ಸಂ)

ವಾದೀತು. ಹುಡುಗನ ಮನಸ್ಸು ಯಾವ ರೀತಿ ಇದೆ ಎಂದು ಅವರಿಗೆ ಅರ್ಥವಾದೀತು. ಆಗ ಬಿಟ್ಟು ಬಂದರೆ ಅವರಿಗೆ ಇಷ್ಟೊಂದು ಸಂಕಟವಾಗದು.'' ಶ್ರೀಮಾತೆಯವರ ಶಿಷ್ಯ ಆಗ ಲಂತೂ ಮನೆಗೆ ಮರಳಬೇಕಾಗಿ ಬಂತು; ಆದರೆ ಸ್ವಲ್ಪ ಹೆತ್ತವರ ಬಳಿ ಇದ್ದು, ಅವರ ಮನಸ್ಸಿಗೆ ನಿಧಾನವಾಗಿ ಮನವರಿಕೆ ಮಾಡಿ ಕೊಟ್ಟು , ಅನಂತರ ಸಂಸಾರತ್ಯಾಗ ಮಾಡಿದ. ಅವರು ಬದುಕಿದ್ದಷ್ಟು ಕಾಲವೂ ಪರಸ್ಪರ ಸುದ್ದಿ ತಿಳಿದುಕೊಳ್ಳುವುದು, ಭೇಟಿಯಾಗುವುದು ಹಾಗೂ ಪ್ರೀತಿ ವಾತ್ಸಲ್ಯಗಳೊಂದಿಗೆ ಸಂಪರ್ಕದಿಂದಿರುವುದು ನಡೆಯುತ್ತಿತ್ತು.

ಸಂಸಾರತ್ಯಾಗ ಮಾಡಿ ಬಂದ ಶಿಷ್ಯಂದಿರ ಮೇಲೆ ಶ್ರೀಮಾತೆಗೆ ಸಹಜವಾಗಿಯೇ ಒಂದು ರೀತಿಯ ಪ್ರೀತಿ ಇರುತ್ತಿತ್ತು. ಅವರ ಚಿಕ್ಕಪ್ಪನ ಮಗಳ ಮಗ ಬಾಂಕು (ಬಂಕಿಮ) ಸಣ್ಣ ವಯಸ್ಸಿನಲ್ಲೇ ಸಂನ್ಯಾಸಿಯಾಗಿ ಮನೆಬಿಟ್ಟು ಹೋಗಿದ್ದ. ಅದನ್ನು ಕೇಳಿದ ಶ್ರೀಮಾತೆ, ''ಅವನು ಸಂನ್ಯಾಸಿಯಾಗಿ ಒಳ್ಳೆಯ ಕೆಲಸ ಮಾಡಿದ! ಈ ಮೂಳೆಮಾಂಸದ ಗೂಡಿನಲ್ಲಿ ಏನು ತಾನೇ ಇದೆ? ಇದೋ ನೋಡು — ವಾತದಿಂದ ಸತ್ತೇ ಹೋಗುತ್ತಿದ್ದೇನೆ! ಈ ದೇಹದಲ್ಲಾದರೂ ಏನಿದೆ? ಯಾತಕ್ಕಾಗಿ ಇಷ್ಟೊಂದು ಮಾಯೆ? ಎರಡು ದಿನದಲ್ಲೇ ಇದು ಮುಗಿದು ನಾಲ್ಕು ಹಿಡಿ ಬೂದಿಯಾಗುವುದು! ಈ ನಾಲ್ಕು ಹಿಡಿ ಬೂದಿಯಂತೂ ಉಳಿಯದು! ಬಾಂಕು ಸಾಧುವಾದ; ಭಗವಂತನ ಕಡೆಗೆ ಹೋದ — ಒಳ್ಳೆಯ ಕೆಲಸ ಮಾಡಿದ, ಒಳ್ಳೆಯ ಕೆಲಸ ಮಾಡಿದ'' ಎಂದರು.

ಶ್ರೀಮಾತೆಯವರಿಗೆ ಸಂನ್ಯಾಸೀ ಶಿಷ್ಯರ ಮೇಲಿದ್ದ ಪ್ರೀತಿಗೆ ಸಂಬಂಧಪಟ್ಟಂತೆ ಇನ್ನೊಂದು ಘಟನೆ ನೆನಪಿಗೆ ಬರುತ್ತಿದೆ. ಒಂದು ದಿನ ಸಾಯಂಕಾಲದ ಹೊತ್ತು ಒಬ್ಬ ಶಿಷ್ಯ೪ ಶ್ರೀಮಾತೆಯವರ ಮುಂದೆ ಪತ್ರಗಳನ್ನು ಓದಿ ಹೇಳುತ್ತಿದ್ದ. ಶ್ರೀಮಾತೆ ನೆಲದಲ್ಲಿ ಆಸನದ ಮೇಲೆ ಕಾಲು ಮಡಚಿ ಕುಳಿತಿದ್ದರು. ಮುಂಭಾಗದಲ್ಲಿ ಲಾಟೀನು ಉರಿಯುತ್ತಿತ್ತು. ಅವರ ಶಿಷ್ಯ ಶ್ರೀಮಾತೆಯವರ ಪಕ್ಕದಲ್ಲಿ ಕುಳಿತು ತಲೆತಗ್ಗಿಸಿ ಪತ್ರ ಓದುತ್ತಿದ್ದ. ಇದ್ದಕ್ಕಿದ್ದಂತೆ ಅವನ ಕಣ್ಣಿಗೆ ಬಿತ್ತು — ಒಂದು ದೊಡ್ಡ ಚೇಳು ಶ್ರೀಮಾತೆಯವರ ಕಡೆಗೆ ಮುನ್ನುಗ್ಗುತ್ತಿದೆ! ಅದನ್ನು ನೋಡುತ್ತಿದ್ದಂತೆ ಶಿಷ್ಯನಿಗೆ ಅನ್ನಿಸಿತು, ಅದು ಶ್ರೀಮಾತೆಯವರನ್ನು ಬಂದು ಕಡಿಯಲಾರದು ತಾನೆ! ಕೂಡಲೇ ಅವನು ಅದನ್ನು ಕಾಲಿನಿಂದ ಹೊಸಕಿ ಹಾಕಿದ. ಬೆತ್ತ ಅಥವಾ ಕೋಲನ್ನು ತರಲು ಅವನಿಗೆ ಸಮಯಾವಕಾಶವಿರಲಿಲ್ಲ. ಶ್ರೀಮಾತೆ ಸತ್ತು ಬಿದ್ದ ಆ ಚೇಳಿನತ್ತ ಕರುಣೆಯಿಂದ ಕೂಡಿದ ದೃಷ್ಟಿಯಿಂದ ನೋಡುತ್ತ ನಿಧಾನವಾಗಿ ಹೇಳಿದರು: ''ಸಾಧುವಿನ ಕಾಲಿನಿಂದ ಒದೆ ತಿಂದು ಅದು ಪ್ರಾಣ ಬಿಟ್ಟಿತು.'' ಅದರ ಜೀವಕ್ಕೆ ಸದ್ಗತಿ ದೊರಕಿತೋ ಎಂಬಂತೆ ಶ್ರೀಮಾತೆ ಆ ಮಾತನ್ನು ಆಡಿದ್ದರು.

ಶ್ರೀಮಾತೆಯವರ ಸಂನ್ಯಾಸಿ ಶಿಷ್ಯರು ಅವರ ಇಚ್ಛೆಗೆ ವಿರುದ್ಧವಾಗಿ ಏನನ್ನೂ ಹೇಳುತ್ತಿರಲಿಲ್ಲ. ಆದರೂ ಅವರ ಪಾದಕಮಲಗಳಲ್ಲಿ ಅತ್ಯಂತ ವ್ಯಾಕುಲತೆಯಿಂದ ತಮ್ಮ ಬಯಕೆ, ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು. ಶ್ರೀಮಾತೆ ಕೂಡ ಅವುಗಳನ್ನು ತಕ್ಕ ಸಮಯದಲ್ಲಿ ಈಡೇರಿಸುತ್ತಿದ್ದರು. ಶ್ರೀಮಾತೆಯವರ ಶಿಷ್ಯರು ಎಷ್ಟೊಂದು ಮುಗ್ಧರಾಗಿರುತ್ತಿದ್ದರೆಂದರೆ, ಯಾವುದೇ ಸಂಕೋಚವಿಲ್ಲದೆ ಅವರು ತಮ್ಮ ಒಳಗಿನ ಬಯಕೆಗಳನ್ನು ಶ್ರೀಮಾತೆಯವರ ಮುಂದೆ ಹೇಳಿಬಿಡುತ್ತಿದ್ದರು. ಶ್ರೀಮಾತೆ ನಕ್ಕುಬಿಡುತ್ತಿದ್ದರು. ಕೆಲವೊಮ್ಮೆ ಅವರು ಅದನ್ನು ಕೇಳಿಸಿಕೊಳ್ಳುತ್ತಿದ್ದರು, ಕೆಲವೊಮ್ಮೆ ಅದನ್ನು ಕಿವಿಗೆ ಹಾಕಿ ಕೊಳ್ಳದೆ ಅನ್ಯಮನಸ್ಕರಾಗಿದ್ದಂತೆ ಕಂಡುಬರುತ್ತಿದ್ದರು. ಪೂಜನೀಯ ಕಪಿಲ ಮಹಾರಾಜರು ಶ್ರೀಮಾತೆಯವರ ವಿಶೇಷ ಪ್ರೀತಿಗೆ ಪಾತ್ರರಾಗಿದ್ದರು. ಬಹುಕಾಲ ಅವರು 'ಉದ್ಬೋಧನ' ದಲ್ಲಿ ಶ್ರೀಮಾತೆಯವರ ಪದತಲವನ್ನು ಆಶ್ರಯಿಸಿ ವಾಸವಾಗಿದ್ದರು. ಒಂದು ಸಲ ಶ್ರೀಮಾತೆ ಜಯರಾಮಬಾಟಿಯಲ್ಲಿದ್ದಾಗ ಅವರ ಕಾಯಿಲೆ ಇನ್ನೇನು ಗುಣವಾಗಿಬಿಟ್ಟಿತು ಎನ್ನುವಷ್ಟರಲ್ಲಿ ಅವರು ಕಲ್ಕತ್ತೆಗೆ ಬರಲು ಹಲವು ಬಾರಿ ಒತ್ತಾಯ ಮಾಡಿದ್ದರು. ಶ್ರೀಮಾತೆ ಆ ಮಾತಿಗೆ ಕಿವಿಗೊಡಲಿಲ್ಲ. ಆದರೆ ಅವರು ಇತರರ ಬಳಿ ಹೇಳಿದ್ದರು, ''ಅವರಾದರೋ ಬತ್ತಲೆ ಸಂನ್ಯಾಸಿಗಳು; ಏಳು ಎಂದರೆ ಎದ್ದು ಬಿಡುತ್ತಾರೆ, ಕೂತಕೋ ಎಂದರೆ ಕುಳಿತು ಬಿಡುತ್ತಾರೆ. ಅವರಿಗೆ ಬೇರೆ ಯಾವುದರ ಗೊಡವೆಯೂ ಇಲ್ಲ, ಯಾವ ಚಿಂತೆಯೂ ಇಲ್ಲ. ಹೆಗಲ ಮೇಲೆ ಕಂಬಳಿ ಹಾಕಿಕೊಂಡು ಹೊರಟೇ ಬಿಡುತ್ತಾರೆ! ನನಗೆ ಆ ರೀತಿ ಸಾಧ್ಯವೆ? ನಾನು ಎಷ್ಟೊಂದು ವಿಷಯಗಳ ಕಡೆಗೆ ಗಮನಕೊಟ್ಟು ಹೊರಡಬೇಕು? ಬೇರೆ ಯಾರಿಗೂ ತೊಂದರೆಯಾಗದಂತೆ ನಾನು ನೋಡಿಕೊಳ್ಳಬೇಕಲ್ಲ.''

ಸಣ್ಣ ಸಣ್ಣ ವಿಷಯಗಳನ್ನೇ ದೊಡ್ಡದನ್ನಾಗಿ ಮಾಡಿ ಗದ್ದಲವೆಬ್ಬಿಸುವುದು ನಮ್ಮ ಸ್ವಭಾವ; ಅದರ ಫಲವಾಗಿ ತುಂಬಾ ಕಷ್ಟನಷ್ಟ ಅನುಭವಿಸುತ್ತೇವೆ. ಶ್ರೀಮಾತೆ ಎಲ್ಲವನ್ನು ತಾಳ್ಮೆಯಿಂದ ಸಹಿಸಿಕೊಂಡು, ಮೌನವಾಗಿ ಎಲ್ಲವನ್ನೂ ಎದುರಿಸಲು ನಮಗೆ ಕಲಿಸುತ್ತಿದ್ದರು. ''ಶ, ಷ, ಸ — ಯಾರು ಸಹಿಸುವನೋ, ಅವನು ಬದುಕುತ್ತಾನೆ. ಸಹಿಸಲಾರದವನು ನಾಶವಾಗುವನು.''

ತಮ್ಮ ಕಷ್ಟಕೋಟಲೆಗಳಿಗಾಗಿ ಶ್ರೀಮಾತೆ ಇತರರನ್ನು ದೂಷಿಸುವ ಕೆಲಸವನ್ನು ಎಂದಿಗೂ ಮಾಡುತ್ತಿರಲಿಲ್ಲ. ಅವರು ಎಲ್ಲರಿಗೂ ಹೇಳಿಕೊಡುತ್ತಿದ್ದರು — ''ಮನುಷ್ಯ ತಾನು ಮಾಡಿದ ಕರ್ಮದ ಫಲವನ್ನೇ ಅನುಭವಿಸುತ್ತಾನೆ. ಆದ್ದರಿಂದ ಇತರರ ಮೇಲೆ ದೋಷಾರೋಪಣೆ ಮಾಡದೆ, ಭಗವಂತನಲ್ಲಿ ಪ್ರಾರ್ಥಿಸುತ್ತ, ಅವನ ಕೃಪೆಯನ್ನೇ ಅವಲಂಬಿಸಿ ಎಲ್ಲ ಸನ್ನಿವೇಶಗಳನ್ನೂ ಧೈರ್ಯದಿಂದ ಎದುರಿಸುವುದೇ ಅತ್ಯಂತ ಉಚಿತ'' ಎನ್ನುತ್ತಿದ್ದರು.

ಯಾರಿಗೆ ಶ್ರೀಮಾತೆಯವರ ಬಳಿ ಕೆಲವು ದಿನಗಳ ಕಾಲವಾದರೂ ವಾಸ ಮಾಡುವ ಸೌಭಾಗ್ಯವೊದಗಿತ್ತೋ, ಅವರಿಗೆ ಚೆನ್ನಾಗಿ ತಿಳಿದಿತ್ತು — ಅವರ ಜೀವನವನ್ನು ರೂಪಿಸಲು ಅಗತ್ಯವಾದ ಚಾರಿತ್ರ್ಯ, ವೈರಾಗ್ಯ, ತಿತಿಕ್ಷೆ, ಸಂಯಮ, ಭಗವನ್ನಾಮ ಸಂಕೀರ್ತನೆ ಹಾಗೂ ಎಲ್ಲ ಸನ್ನಿವೇಶಗಳಲ್ಲೂ ಭಗವಂತನ ಮೇಲೆ ದೃಢ ವಿಶ್ವಾಸ, ನಿಷ್ಠೆ, ಭಕ್ತಿ, ನಿರ್ಭರತೆ ಇವನ್ನೆಲ್ಲ ಶ್ರೀಮಾತೆ ಅವರಿಗೆ ಕಲಿಸುತ್ತಿದ್ದರು ಎಂಬುದಾಗಿ. ಶ್ರೀಮಾತೆಯವರಲ್ಲಿ ಹೇಗೋ ಹಾಗೆಯೇ ಅವರ ಶಿಷ್ಯಂದಿರಲ್ಲೂ ಭಾವುಕತೆಯ ಆಡಂಬರ ಕಂಡುಬರುತ್ತಿರಲಿಲ್ಲ. ಎಲ್ಲರಲ್ಲೂ ಸೌಮ್ಯ, ಶಾಂತ, ಧೀರ ಹಾಗೂ ಸ್ಥಿರ ಗುಣಗಳು ಕಂಡುಬರುತ್ತಿದ್ದವು.

*(ಮುಗಿಯಿತು)*

೪ ಸ್ವತಃ ಲೇಖಕರು. *(-ಸಂ)*